**ಓ.ಎಸ್. ನಂಃ 40/18**

**ಡಿ.ಡಬ್ಲ್ಯೂಃ 2**

**ದಿನಾಂಕ 14.11.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರುಃ** | **ಬೋರನಾಯಕ** |
| **ತಂದೆಯ ಹೆಸರುಃ** | **ಲೇಟ್ ತಮ್ಮಯ್ಯನಾಯಕ** |
| **ವಯಸ್ಸುಃ** | **54 ವರ್ಷ** |
| **ಉದ್ಯೋಗಃ** | **ಕೂಲಿ ಕೆಲಸ** |
| **ವಾಸ ಸ್ಥಳಃ** | **ಹಂಪಾಪುರ** |

**ಮುಖ್ಯ ವಿಚಾರಣೆ ಪ್ರತಿವಾದಿಯ ಪರ: ಶ್ರೀ.ಎ.ಪಿ. ವಕೀಲರಿಂದಃ**

ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ.

**( ಈ ಹಂತದಲ್ಲಿ ಪ್ರತಿವಾದ ಪರ ವಕೀಲರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದ್ದು–ಅನುಮತಿ ನೀಡಲಾಯಿತು)**

## ಪಾಟೀ ಸವಾಲು ಪ್ರತಿವಾದಿಯ ಪರ: ಶ್ರೀ.ಎ.ಪಿ. ವಕೀಲರಿಂದಃ

1. ನನಗೆ ಈ ದಾವೆಯಲ್ಲಿ ನ್ಯಾಯಾಲಯದ ನೋಟಿಸು ಬಂದ ನಂತರದಲ್ಲಿ ನಾನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿ. ಸುಮಾರು 10 ವರ್ಷಗಳಿಂದ ನನಗೆ ಈ ದಾವೆಯ ಪ್ರತಿವಾದಿಯ ಪರಿಚಯವಿದೆ. ನನ್ನ ಮತ್ತು ಈ ದಾವೆಯ ಪ್ರತಿವಾದಿಯ ಮಧ್ಯೆ ಕೇವಲ ಒಂದು ಬಾರಿ ಮಾತ್ರ ಹಣಕಾಸಿನ ವ್ಯವಾಹಾರವಾಗಿತ್ತು ಎಂದರೆ ಸರಿ. ಆ ರೀತಿ ನನ್ನ ಮತ್ತು ಈ ದಾವೆಯ ಪ್ರತಿವಾದಿಯ ಮಧ್ಯೆ ಹಣಕಾಸಿನ ವ್ಯವಾಹಾರವಾದ ಸಂದರ್ಭದಲ್ಲಿ ನಾನು ಈ ದಾವೆಯ ಪ್ರತಿವಾದಿಯಿದ 2 ಖಾಲಿ ಪ್ರೊನೋಟ್ ಮತ್ತು 1 ಖಾಲಿ ಚೆಕ್ಕನ್ನು ಭದ್ರತೆಗಾಗಿ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕೇವಲ ನನ್ನ ಮತ್ತು ವಾದಿಯ ಮಧ್ಯೆ ಮಾತ್ರ ಹಣಕಾಸಿನ ವ್ಯವಹಾರವಾಗಿದ್ದು, ನನ್ನ ಮತ್ತು ಈ

ದಾವೆಯ ಪ್ರತಿವಾದಿಯ ಮಧ್ಯೆ ಎಂದಿಗೂ ಸಹ ಯಾವುದೇ ರೀತಿಯ ಹಣಕಾಸಿನ ವ್ಯವಹಾರವಾಗಿರುವುದಿಲ್ಲ ಎಂದು ಸಾಕ್ಷಿಯು ನುಡಿದಿರುತ್ತಾರೆ.

2. ನನ್ನ ಮತ್ತು ಈ ದಾವೆಯ ಪ್ರತಿವಾದಿಯ ಮಧ್ಯೆ ಹಣಕಾಸಿನ ವ್ಯವಹಾರವಾದಾಗ ಅವರಿಂದ ಭದ್ರತೆಗೆಂದು ಪಡೆದಿದ್ದ ಒಂದು ಪ್ರೋನೋಟ್ ದುರುಪಯೋಗಪಡಿಸಿಕೊಂಡು ನಾನು ಈ ದಾವೆಯ ಪ್ರತಿವಾದಿಯ ವಿರುದ್ಧ ಇದೇ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 198/2018 ರ ದಾವೆಯನ್ನು ಹೂಡಿದ್ದೆ ಎಂದರೆ ಸಾಕ್ಷಿಯು ನಾನು ಈ ದಾವೆಯ ಪ್ರತಿವಾದಿಯ ವಿರುದ್ಧ ಯಾವುದೇ ಕೇಸನ್ನು ಹೂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಹೂಡಿದ್ದ ಅಸಲು ದಾವೆ ಸಂಖ್ಯೆ 198/2018 ರ ದಾವೆಯು ನನ್ನ ಪರ ಡಿಕ್ರಿ ಆಗಿರುತ್ತದೆ ಎಂದರೆ ಸಾಕ್ಷಿಯು ಸದರಿ ದಾವೆಯನ್ನು ಹೂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಸಲು ದಾವೆ ಸಂಖ್ಯೆ 198/2018 ರ ದಾವೆಯಲ್ಲಿ ಈ ದಾವೆಯ ಪ್ರತಿವಾದಿಯು ತಮ್ಮ ಪರ ಯಾವುದೇ ವಕೀಲರನ್ನು ನೇಮಕ ಮಾಡದಿದ್ದ ಕಾರಣ ಸದರಿ ದಾವೆಯು ಏಕಪಕ್ಷೀಯವಾಗಿ ಡಿಕ್ರಿ ಆಗಿರುತ್ತದೆ ಎಂದರೆ ಸರಿ.

3. ಅಸಲು ದಾವೆ ಸಂಖ್ಯೆ 198/2018 ರ ದಾವೆಯ ಡಿಕ್ರಿಯ ಪ್ರಕಾರ ನಾನು ಈ ದಾವೆಯ ಪ್ರತಿವಾದಿಯ ವಿರುದ್ಧ ಅಮಲುಜಾರಿ ಪ್ರಕರಣ ಸಂಖ್ಯೆ 132/2018 ರ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಾನು ಮತ್ತು ಈ ದಾವೆಯ ಪ್ರತಿವಾದಿ ನ್ಯಾಯಾಲಯದ ಹೊರಗೆ 1,55,000/- ರೂಪಾಯಿಗಳಿಗೆ ರಾಜಿ ಮಾಡಿಕೊಂಡು ಅಮಲುಜಾರಿ ಪ್ರಕರಣ ಸಂಖ್ಯೆ 132/2018 ರ ಪ್ರಕರಣವನ್ನು ರಾಜಿ ಮೂಲಕ ಮುಕ್ತಾಯಗೊಳಿಸಿರುತ್ತೇನೆ ಎಂದರೆ ಸಾಕ್ಷಿಯು ನಾನು ಈ ದಾವೆಯ ಪ್ರತಿವಾದಿಯ ವಿರುದ್ಧ ಯಾವುದೇ ಅಮಲುಜಾರಿ ಪ್ರಕರಣವನ್ನು ಹೂಡಿರುವುದಿಲ್ಲ ಎಂದು ನುಡಿದಿರುತ್ತಾರೆ.

4. ಸಾಲದ ಭದ್ರತೆಗೆಂದು ನಾನು ಈ ದಾವೆಯ ಪ್ರತಿವಾದಿಯಿಂದ ಪಡೆದಿದ್ದ ಖಾಲಿ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ದಾವೆಯ ಪ್ರತಿವಾದಿಯ ವಿರುದ್ಧ ಕೆ ಆರ್ ನಗರ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಸಿ.ಸಿ.257/2021 ರ ಚೆಕ್ ಬೌನ್ಸ್ ಪ್ರಕರಣವನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೂಡಿದ್ದ ಸದರಿ ಸಿ.ಸಿ.257/2021 ರ ಚೆಕ್ ಬೌನ್ಸ್ ಪ್ರಕರಣದಲ್ಲಿ ಈ ದಾವೆಯ ಪ್ರತಿವಾದಿಯನ್ನು

ನಿರಪರಾಧಿ ಎಂದು ಬಿಡುಗಡೆ ಮಾಡಲಾಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

5. ನಾನು ನನ್ನ ಸಹಿಯನ್ನು ಕನ್ನಡ ಭಾಷೆಯಲ್ಲಿ ಮಾಡುತ್ತೇನೆ. ಸಾಕ್ಷಿಗೆ ಈಗ ತಾವು ಸಿ.ಸಿ.257/2021 ರ ಪ್ರಕರಣದಲ್ಲಿ ನೀಡಿದ ಸಾಕ್ಷಿ ವಿಚಾರಣೆಯ ದೃಢಿಕೃತ ನಕಲನ್ನು ಮತ್ತು ಅದರಲ್ಲಿರುವ ಸಹಿಯನ್ನು ತೋರಿಸಿದ್ದು, ಸದರಿ ಸಾಕ್ಷಿ ವಿಚಾರಣೆಯನ್ನು ತಾವು ನೀಡಿರುವುದಿಲ್ಲ ಮತ್ತು ಸದರಿ ಸಾಕ್ಷಿ ವಿಚಾರಣೆಯಲ್ಲಿರುವ ಸಹಿ ತನ್ನ ಸಹಿ ಅಲ್ಲ ಎಂದು ನುಡಿದಿರುತ್ತಾರೆ. ಗುರುತಿಸುವಿಕೆಯ ಉದ್ದೇಶದಿಂದ ಸದರಿ ದಾಖಲೆಯನ್ನು ನಿಡಿ.10 ಎಂದು ಗುರುತಿಸಲಾಯಿತು. ನಾನು ಸಾಲದ ಭದ್ರತೆಗೆಂದು ಈ ದಾವೆಯ ಪ್ರತಿವಾದಿಯಿಂದ ಪಡೆದಿದ್ದ 2 ಖಾಲಿ ಪ್ರೊನೋಟ್ ಗಳ ಪೈಕಿ ನಿಪಿ.1 ರ ಪ್ರೋನೋಟ್ ನ್ನು ದುರುಪಯೋಗಪಡಿಸಿಕೊಂಡು ಈ ದಾವೆಯ ಮೂಲಕ ಈ ದಾವೆಯನ್ನು ಪ್ರತಿವಾದಿಯ ವಿರುದ್ಧ ನಾನೇ ಹೂಡಿಸಿರುತ್ತೇನೆ ಎಂದರೆ ಸರಿಯಲ್ಲ.

6. ನಿಪಿ.1 ರಲ್ಲಿ ಇರುವ ಬೋರನಾಯಕ ಎನ್ನುವ ಸಹಿ ನನ್ನದಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ.

**ವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ**